# ಕರಾವಳಿ ಪ್ರೇಮದ ಮೋಗ್

**ಕರಾವಳಿ ಬದುಕಿನ ಚಿತ್ರಣವನ್ನೂ ಸಮಕಾಲೀನ ಕಲೆಯ ಮಾಧ್ಯಮಗಳನ್ನೂ ಒಟ್ಟೊಟ್ಟಿಗೆ ತೆರೆದಿಡುತ್ತದೆ ಗೋವಾದ ‘ಮೋಗ್’.**

■ ಅದಿತಿ ಎ.


ಫೈಬರ್‌ನಲ್ಲಿ ರೂಪು ತಳೆದ ಹಲಸು


ಕ್ರೋಚೆಟ್ ಕಲೆ


ಕುಂಚದಲ್ಲಿ ಕರಾವಳಿ ಬದುಕಿನ ಅನಾವರಣ

ಬೀಚು, ಪಾರ್ಟಿ, ಚರ್ಚುಗಳ ಹೊರತಾಗಿಯೂ ‘ಗೋವಾ’ ಎಂಬ ದಕ್ಷಿಣ ಭಾರತದ ಪುಟ್ಟ ಕರಾವಳಿ ರಾಜ್ಯ ಹಲವು ಕುತೂಹಲಗಳನ್ನು ಬಚ್ಚಿಟ್ಟುಕೊಂಡಿದೆ. ಪಶ್ಚಿಮಘಟ್ಟದ ಪ್ರಾಕೃತಿಕ ಸೌಂದರ್ಯವನ್ನು ಹೊದ್ದುಕೊಂಡಿರುವ ಈ ಮಾಜಿ ಪೋರ್ಚುಗೀಸ್ ಕಾಲೊನಿ, ಕಲೆ ಹಾಗೂ ಸಂಸ್ಕೃತಿಯ ಗೂಡು ಕೂಡ ಹೌದು.

ಈ ಮಾತನ್ನು ಸಮರ್ಥಿಸುವಂತೆ ಗೋವಾದಲ್ಲಿ ಬಗೆ ಬಗೆಯ ವಸ್ತುಸಂಗ್ರಹಾಲಯಗಳಿವೆ. ಅವುಗಳಲ್ಲಿ ‘ಮ್ಯೂಸಿಯಂ ಆಫ್ ಗೋವಾ – ಮೋಗ್’ (MOG) ಚಿತ್ರಕಲಾ ವಸ್ತು ಸಂಗ್ರಹಾಲಯ ಗಮನಸೆಳೆಯುವಂತಿದೆ. ಕೊಂಕಣಿ ಭಾಷೆಯಲ್ಲಿ ‘ಮೋಗ್’ ಎಂದರೆ ಪ್ರೇಮ. ಹೆಸರಿಗೆ ತಕ್ಕಂತೆ ಕಲಾಪ್ರೇಮಿಗಳಿಗೆ ಇದು ವಿಶೇಷ ತಾಣವೂ ಹೌದು.



ಪಣಜಿಯಿಂದ 10 ಕಿ.ಮೀ. ದೂರದ ಪಿಲೆರ್ನೆ ಎಂಬ ಹಳ್ಳಿಯಲ್ಲಿ ಈ ವಸ್ತು ಸಂಗ್ರಹಾಲಯವಿದೆ. ಇದರ ಸ್ಥಾಪಕರು ಚಿತ್ರಕಲೆಗಾರ ಚಂದ್ರಕಾಂತ್ ಕೇರ್ಕರ್ ಅವರ ಪುತ್ರ ಡಾ. ಸುಬೋಧ್ ಕೇರ್ಕರ್. ಗೋವಾದ ಸಮುದ್ರ ತೀರದ ಚೆಲುವಿನಿಂದ ಪ್ರೇರೇಪಿತರಾದ ಸುಬೋಧ್ ಅವರು ವೈದ್ಯ ವೃತ್ತಿ ಬಿಟ್ಟು ಕಲೆಗಾರರಾಗಿ ತಂದೆಯ ಹಾದಿಯಲ್ಲಿ ನಡೆದರು. 2015ರಲ್ಲಿ ಸಮಕಾಲೀನ ಕಲಾ ಕೇಂದ್ರವಾಗಿ ಈ ವಸ್ತು ಸಂಗ್ರಹಾಲಯ ರೂಪಿಸಿದರು.

ಗೋವಾದ ಸಂಸ್ಕೃತಿ, ಕರಾವಳಿ ಜನಜೀವನದ ಸ್ವಾರಸ್ಯಗಳನ್ನು ತೆರೆದಿಡುವ ಈ ವಸ್ತುಸಂಗ್ರಹಾಲಯದಲ್ಲಿ ಸಮಕಾಲೀನ ಕಲೆಯ ವಿವಿಧ ಮಾಧ್ಯಮಗಳನ್ನು ಕಾಣಬಹುದು. ಸಮುದ್ರ ತೀರದಲ್ಲಿ ಸಿಗುವಂತಹ ಚಿಪ್ಪುಗಳು, ಕವಡೆಗಳು, ತೆಂಗಿನ ಚಿಪ್ಪುಗಳು, ಶಂಖಗಳು, ದೋಣಿಯ ಹಲಗೆಗಳಂಥ ಸಾಮಗ್ರಿಗಳಿಂದ ಹಲವು ಕಲಾಕೃತಿಗಳನ್ನು ಸೃಷ್ಟಿಸಲಾಗಿದೆ. ಚಿತ್ರಕಲೆಯಲ್ಲಿ ಗೋವಾದ ಮೀನುಗಾರರ ಜೀವನಶೈಲಿಯು ಅತ್ಯದ್ಭುತವಾಗಿ ಒಡಮೂಡಿದೆ. ಪ್ರತಿ ಕಲಾಕೃತಿ ಹಿಂದೆಯೂ ಕಥೆಯೊಂದು ಅಡಗಿರುವಂತೆ ಕಾಣುತ್ತದೆ.

ವಿಧವಿಧವಾದ ‘ಟೀ ಬ್ಯಾಗ್’ ಕಲೆಯು ಅಲ್ಲಿನ ಜನರ ಚಹಾಪ್ರೇಮಕ್ಕೆ ನಿದರ್ಶನ. ಫೈಬರ್‌ನಿಂದ ಮಾಡಿದ ಹಲಸಿನ ಗೊಂಚಲು ನಿಜವಾದ ಹಣ್ಣನ್ನೇ ಹೋಲುತ್ತದೆ. ಸ್ಪೈಸ್ ಪ್ಲಾಂಟೇಷನ್ಸ್ (ಮಸಾಲೆ ತೋಟಗಳು) ಹಾಗೂ ಮೆಣಸಿನಕಾಯಿಯ ಯಥೇಚ್ಛ ಬಳಕೆಯನ್ನು ಹಲವು ಕಲಾಕೃತಿಗಳ ಮೂಲಕ ತೆರೆದಿಡಲಾಗಿದೆ. ವಿವಿಧ ವಸ್ತ್ರಗಳಿಂದ ಮಾಡಿದ ಮೆಣಸಿನಕಾಯಿಗಳ ಕಲೆ ಚಿತ್ತ ಸೆಳೆಯುತ್ತದೆ.

ಗೋವಾದ ಮೇಲೆ ಪೋರ್ಚುಗೀಸರಿಂದಾದ ಪ್ರಭಾವವನ್ನೂ ಕಲೆಯಲ್ಲಿ ಕಾಣಬಹುದು. ಅವರಿಂದ ಭಾರತಕ್ಕೆ ಪರಿಚಯವಾದ ಕ್ರೋಚೆಟ್ ಮಾಧ್ಯಮವನ್ನೂ ಇಲ್ಲಿ ಬಳಸಿಕೊಳ್ಳಲಾಗಿದೆ. ಕಲಾಕೃತಿಗಳೊಂದಿಗೆ ಬಣ್ಣ ಬಣ್ಣದ ಕ್ರೋಚೆಟ್ ವಿನ್ಯಾಸಗಳನ್ನು ಬಳಸಿದ್ದಾರೆ.

ಬೈಬಲ್‌ನಲ್ಲಿ ಬರುವ ನೋಹಾನ ಕಥೆಗೆ ಸಮಾನ ರೂಪವಾಗಿ ‘ಗೋವಾಸ್ ಆರ್ಕ್’ ಎಂಬ ಕಲಾಕೃತಿ ರೂಪಿತಗೊಂಡಿದೆ. ದೋಣಿ ಮೇಲೆ ಮುಕ್ಕೋಟಿ ದೇವರ ಪ್ರತಿಷ್ಠಾಪನೆಯಾಗಿದ್ದು, ಆ ದೋಣಿ ಸಮುದ್ರದ ಅಲೆಗಳಿಗೆ ಲಯಬದ್ಧವಾಗಿ ಅಲ್ಲಾಡುವ ಹಾಗೆ ಮಾಡಲಾಗಿದೆ. ವಸಾಹತುಶಾಹಿಗಳ ಕೈಯಲ್ಲಿ ಹೇಗೆ ದೇವಸ್ಥಾನಗಳು ವಿನಾಶಕ್ಕೆ ತುತ್ತಾದವು ಎಂಬುದನ್ನು ದೃಶ್ಯರೂಪದಲ್ಲಿ ತೋರುವ ಕಲಾಕೃತಿಯಿದು.

ಈ ಕಲಾಕೃತಿಗಳನ್ನು ಸುಲಭವಾಗಿ ಅರ್ಥೈಸಲು ಸಾಕ್ಷ್ಯಚಿತ್ರವನ್ನೂ ರೂಪಿಸಲಾಗಿದೆ. ಕಟ್ಟಡದ ಒಂದು ಭಾಗವನ್ನು ಕಲಾ ಪ್ರದರ್ಶನಕ್ಕೆ ಮೀಸಲಿಡಲಾಗಿದೆ.

‘ಮೋಗ್’ನಲ್ಲಿನ ಕಲಾಕೃತಿಗಳು ಕಲೆ ಮಾತ್ರವಲ್ಲದೆ, ಇತಿಹಾಸ ಹಾಗೂ ಜೀವ ತುಂಬಿದ ಕಲ್ಪನೆಗಳಂತೆಯೂ ಕಾಣುತ್ತವೆ. ಗೋವಾಗೆ ಭೇಟಿ ಕೊಟ್ಟವರೊಮ್ಮೆ ‘ಮೋಗ್’ ಸಂಗ್ರಹಾಲಯದ ಕಡೆಗೂ ಹೋಗಿ ಬಂದರೆ ಗೋವಾದ ಸಂಪೂರ್ಣ ಚಿತ್ರಣವನ್ನು ದಕ್ಕಿಸಿಕೊಳ್ಳಬಹುದು.

ಪ್ರತಿಕ್ರಿಯಿಸಿ: feedback@sudha.co.in